## 6. ಆನ್‌ಲೈನ್‌ನಲ್ಲಿ ಉಚಿತವಾಗಿ ಸಿಗುತ್ತೆ ರಾಜ್ಯ ಪಠ್ಯಪುಸ್ತಕ

ಮಕ್ಕಳ ಶಾಲಾರಂಭದ ಚಿಂತೆ ಬಿಡಿ, ಆನ್‌ಲೈನ್ ಮೂಲಕ ನಿಮಗೆ ಬೇಕಾದ ಪಠ್ಯಪುಸ್ತಕ ಡೌನ್‌ಲೋಡ್ ಮಾಡಿಕೊಂಡು, ಮನೆಯಲ್ಲೇ ಪಠ್ಯ ಬೋಧಿಸಬಹುದು. ರಾಜ್ಯ ಪಠ್ಯಕ್ರಮದ 1ರಿಂದ 10ನೇ ತರಗತಿಯ ಎಲ್ಲಾ ವಿಷಯ, ಮಾಧ್ಯಮದ ಪಠ್ಯಗಳು ಆನ್‌ಲೈನ್‌ನಲ್ಲಿ ಲಭ್ಯವಿದೆ. ರಾಜ್ಯ ಸರ್ಕಾರ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಂಗಸಂಸ್ಥೆಯಾದ ಕರ್ನಾಟಕ ಪಠ್ಯಪುಸ್ತಕ ಸಂಘದ ಅಧಿಕೃತ ವೆಬ್‌ಸೈಟ್‌ನಲ್ಲಿ ಪಠ್ಯಪುಸ್ತಕಗಳು ಪಿಡಿಎಫ್ ರೂಪದಲ್ಲಿ ಡೌನ್‌ಲೋಡ್‌ಗೆ ಸಿದ್ದವಿದೆ. ಮುಂದಿನ ಶೈಕ್ಷಣಿಕ ವರ್ಷದ ಪಠ್ಯವನ್ನೂ ಅಪ್‌ಲೋಡ್ ಮಾಡಲಾಗಿದೆ. ವಿದ್ಯಾರ್ಥಿಗಳ ಪಾಲಕ, ಪೋಷಕರು ಕರ್ನಾಟಕ ಪಠ್ಯಪುಸ್ತಕ ಸಂಘದ ವೆಬ್‌ಸೈಟ್‌ಗೆ ಭೇಟಿ ನೀಡಿ ಅತ್ಯಂತ ಸುಲಭವಾಗಿ ತಮಗೆ ಬೇಕಾದ ಮಾಧ್ಯಮದ ಪಠ್ಯಪುಸ್ತಕ ಡೌನ್‌ಲೋಡ್ ಮಾಡಿಕೊಂಡು, ಮನೆಯಲ್ಲೇ ತರಗತಿಯ ಪಾಠ ಕಲಿಸಬಹುದು.

ಸಂಘದ ವೆಬ್‌ಸೈಟ್ http://www.ktbs.kar.nic.in/ಗೆ ಭೇಟಿ ನೀಡಿದರೆ, ಪಠ್ಯಪುಸ್ತಕ ಆನ್‌ಲೈನ್ ಎಂಬ ಆಯ್ಕೆ ಇದೆ. ವೆಬ್‌ಸೈಟ್‌ನಲ್ಲಿ ಎಲ್ಲಾ ಮಾಧ್ಯಮದ ಪಠ್ಯಪುಸ್ತಕಗಳು ಲಭ್ಯವಿರುವುದರಿಂದ ಮಕ್ಕಳ ಮುಂದಿನ ತರಗತಿಗೆ ಅನುಗುಣವಾಗಿ ಆಸಕ್ತ ಪಾಲಕ, ಪೋಷಕರು ಡೌನ್‌ಲೋಡ್ ಮಾಡಿಕೊಂಡು ಮನೆಯಲ್ಲೇ ತಮಗೆ ಲಭ್ಯವಿರುವ ಸಮಯದಲ್ಲಿ ಬೋಧನೆ ಮಾಡಬಹುದು. ಶಾಲಾ ತರಗತಿಯಷ್ಟು ಸಮರ್ಪಕವಾಗಿ ಅಲ್ಲದಿದ್ದರೂ, ಮಕ್ಕಳ ಮುಂದಿನ ಶೈಕ್ಷಣಿಕ ತರಗತಿಗೆ ಅನುಕೂಲವಾಗುವಂತೆ ಮನೆಯಲ್ಲೇ ಹೇಳಿಕೊಡಬಹುದಾಗಿದೆ. ಮೊಬೈಲ್‌ನಲ್ಲೂ ಈ ಪುಸ್ತಕಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ಶಿಕ್ಷಣ ಇಲಾಖೆ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಆಧಾರ:ಉದಯವಾಣಿ, ದಿನಾಂಕ:04.07.2020